ಹೊಸ ತಾಲ್ಲೂಕುಗಳ ರಚನೆ

3188 (3048); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)

ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಚಿಕ್ಕಮಗಳೂರು ಜಿಲ್ಲೆಯ ಯಾವ ಯಾವ ಭಾಗದಿಂದ ಹೊಸ ತಾಲ್ಲೂಕುಗಳ ರಚನೆಗೆ ಬೇಡಿಕೆ ಬಂದಿದೆ;

ಇ) ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿಯನ್ನು ತಾಲ್ಲೂಕು ಕೇಂದ್ರವಾಗಿ ಮಾಡಬೇಕೆಂಬ ಕೋರಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ತಾಲ್ಲೂಕು ಕೇಂದ್ರದಿಂದ 100 ಕಿ.ಮೀ. ದೂರವಿರುವ ಕಳಸವನ್ನು ತಾಲ್ಲೂಕು ಕೇಂದ್ರವಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) 2013–14ನೇ ಸಾಲಿನ ಆಯವ್ಯಯದಲ್ಲಿ 43 ತಾಲ್ಲೂಕುಗಳನ್ನು ಹೊಸದಾಗಿ ರಚಿಸುವುದಾಗಿ ಘೋಷಿಸಿದ್ದು, ಈ ತಾಲ್ಲೂಕುಗಳನ್ನು ರಚಿಸಲು ಬದ್ಧವಾಗಿರುತ್ತದೆ.

ಆ) ಅಲ್ಲೂರು, ಕಳಸ ಮತ್ತು ಅಜ್ಜಂಪುರಗಳನ್ನು ತಾಲ್ಲೂಕುಗಳೆಂದು ರಚಿಸುವಂತೆ ಮನವಿಗಳು ಸ್ವೀಕೃತವಾಗಿರುತ್ತವೆ.

ಇ) ಹೌದು.

ಈ) 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ತಾಲ್ಲೂಕುಗಳ ಪೈಕಿ ಕಳಸವು ಸೇರಿರುವುದಿಲ್ಲ ಮತ್ತು ತಾಲ್ಲೂಕುಗಳನ್ನು ರಚಿಸಲು ನೇಮಿಸಲಾಗಿದ್ದ ಸಮಿತಿಗಳಲ್ಲಿ ಕಳಸವನ್ನು ತಾಲ್ಲೂಕೆಂದು ರಚಿಸಲು ಶಿಫಾರಸ್ಸು ಮಾಡಿರುವುದಿಲ್ಲ.